# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **197** |
| **ಸದಸ್ಯರ ಹೆಸರು** | : | **ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **16.02.2022** |
| **ಉತ್ತರಿಸುವ ಸಚಿವರು** | : | **ಮಾನ್ಯ ಕಂದಾಯ ಸಚಿವರು** |

| ಪ್ರಶ್ನೆ | ಉತ್ತರ |
|---|---|
| **(ಅ)** 2021-22ನೇ ಸಾಲಿನಲ್ಲಿ ಭಾರೀ ಮಳೆ ಮತ್ತು ಪ್ರವಾಹದಿಂದಾಗಿ ಮನೆಗಳಿಗೆ ನೀರು ನುಗ್ಗಿ ಅವಾಂತರಕ್ಕೆ ಸಿಲುಕಿದ್ದ ಕುಟುಂಬಗಳಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು; ಈ ಬಗ್ಗೆ ಕುಟುಂಬಗಳು ನೀಡಿರುವ ಪರಿಹಾರ ಮೊತ್ತವೆಷ್ಟು; (ಮಾಹಿತಿಯನ್ನು ಜಿಲ್ಲಾವಾರು ಸಲ್ಲಿಸುವುದು) | 2021ನೇ ಸಾಲಿನ ಜುಲೈ, ಆಗಸ್ಟ, ಅಕ್ಟೋಬರ್ ಮತ್ತು ನವೆಂಬರ್ ಮಾಹೆಯಲ್ಲಿ ಉಂಟಾದ ಅತಿವೃಷ್ಟಿ/ಪ್ರವಾಹದಿಂದ ನೀರು ನುಗ್ಗಿ ಬಟ್ಟೆ ಬರೆ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಕಳೆದುಕೊಂಡ ಸಂತ್ರಸ್ಥರಿಗೆ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ರೂ.3,800/-ಗಳನ್ನು ನಿಗಧಿಪಡಿಸಿದ್ದು, ಇದರ ಜೊತೆ ರಾಜ್ಯ ಸರ್ಕಾರದಿಂದ ರೂ.6,200/-ಗಳನ್ನು ಸೇರಿ ಒಟ್ಟು ರೂ.10,000/-ದಂತೆ 85,862 ಕುಟುಂಬಗಳಿಗೆ ರೂ.8586.20ಲಕ್ಷಗಳನ್ನು ಪಾವತಿಸಲಾಗಿದೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ. |
| **(ಆ)** ಸಂಪೂರ್ಣ ಮನೆ ಕಳೆದುಕೊಂಡ ಕುಟುಂಬದವರಿಗೆ ಕೇವಲ 10 ಸಾವಿರ, 25 ಸಾವಿರ, 50 ಸಾವಿರ ರೂ.ಗಳ ಪರಿಹಾರ ನೀಡಿದರೆ ಸಂತ್ರಸ್ಥರು ಸುರಕ್ಷಿತ ಸೂರು ಕಟ್ಟಿಕೊಳ್ಳಲು ಸಾಧ್ಯವೇ; ಈ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ; (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಂಇ 336 ಟಿಎನ್ಆರ್ 2021, ದಿನಾಂಕ:12.08.2021ರಂತೆ 2021ನೇ ಸಾಲಿನ ಜುಲೈ, ಆಗಸ್ಟ, ಅಕ್ಟೋಬರ್ ಮತ್ತು ನವೆಂಬರ್ ಮಾಹೆಯಲ್ಲಿ ಉಂಟಾದ ಪ್ರವಾಹದಿಂದ ಮನೆ ಹಾನಿಯಾದ ಸಂತ್ರಸ್ಥರಿಗೆ ಕೇಂದ್ರ ಸರ್ಕಾರದಿಂದ ನಿಗದಿಪಡಿಸಿರುವ ದರಕ್ಕಿಂತ ಈ ಕೆಳಕಂಡ ಪರಿಷ್ಕೃತ ದರದಲ್ಲಿ ಪರಿಹಾರ ಪಾವತಿಸಲಾಗಿದೆ. |
| **(ಇ)** ಭಾರೀ ಮಳೆಯಿಂದಾಗಿ ಮನೆ ಕಳೆದುಕೊಂಡ ಸರ್ಕಾರದ ಸಮೀಕ್ಷೆಯಂತೆ 85,860 ಕುಟುಂಬಗಳಿಗೆ ಸಂಪೂರ್ಣವಾಗಿ ಪರಿಹಾರವನ್ನು ಒದಗಿಸಲಾಗಿದೆಯೇ; ಇಲ್ಲದಿದ್ದಲ್ಲಿ ಬಾಕಿ ಪರಿಹಾರದ ಮೊತ್ತವನ್ನು ಎಷ್ಟು ದಿವಸದೊಳಗಾಗಿ ವಿತರಣೆ ಮಾಡಲಾಗುವುದು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | 2021-22ನೇ ಸಾಲಿನಲ್ಲಿ ಭಾರೀ ಮಳೆ ಮತ್ತು ಪ್ರವಾಹದಿಂದಾಗಿ 85,862 ಮನೆಗಳಿಗೆ ನೀರು ನುಗ್ಗಿ ಬಟ್ಟೆ ಬರೆ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಕಳೆದುಕೊಂಡ ಅರ್ಹ ಸಂತ್ರಸ್ಥರಿಗೆ ತಲಾ ರೂ.10,000/-ದಂತೆ ಪರಿಹಾರವನ್ನು ಸಂಪೂರ್ಣವಾಗಿ ಪಾವತಿಸಲಾಗಿದೆ. |

| | ಮಾರ್ಗಸೂಚಿ ದರ | ಹೆಚ್ಚುವರಿ ದರ | ಒಟ್ಟು |
|---|---|---|---|
| ಪೂರ್ಣ ಮನೆ ಹಾನಿ | ರೂ.95,100/- | ರೂ.4,04,900/- | ರೂ.5.00 ಲಕ್ಷ |
| ತೀವ್ರ ಮನೆ ಹಾನಿ | ರೂ.95,100/- | ರೂ.2,049,00/- | ರೂ.3.00 ಲಕ್ಷ |
| ಭಾಗಶಃ ಮನೆ ಹಾನಿ | ರೂ.5,200/- | ರೂ.44,800/- | ರೂ.50,000/- |

ಕಂಇ 51 ಟಿಎನ್ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು

**ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:197ಕ್ಕೆ ಅನುಬಂಧ**

| ಕ್ರ. ಸಂ. | ಜಿಲ್ಲೆ | ನೆರೆ ಸಂತ್ರಸ್ಥರ ಗೃಹೋಪಯೋಗಿ ವಸ್ತುಗಳ ಹಾನಿಗೆ ಬಿಡುಗಡೆಯಾದ ಮೊತ್ತ | | |
|---|---|---|---|---|
| | | ಸಂತ್ರಸ್ಥ ಕುಟುಂಬಗಳು | SDRF @ 3800 | Addl SDRF @6200 |
| 1 | 2 | 3 | 4 | 5 |
| 1 | ಬಾಗಲಕೋಟೆ | 5246 | 199.35 | 325.25 |
| 2 | ಬಳ್ಳಾರಿ | 9 | 0.34 | 0.56 |
| 3 | ಬೆಳಗಾವಿ | 67511 | 2565.42 | 4185.68 |
| 4 | ಬೆಂಗಳೂರು(ಗ್ರಾ) | 0 | 0.00 | 0.00 |
| 5 | ಬೆಂಗಳೂರು (ನ) | 0 | 0.00 | 0.00 |
| 6 | ಬೀದರ್ | 73 | 2.77 | 4.53 |
| 7 | ಚಾಮರಾಜನಗರ | 0 | 0.00 | 0.00 |
| 8 | ಚಿಕ್ಕಬಳ್ಳಾಪುರ | 1250 | 47.50 | 77.50 |
| 9 | ಚಿಕ್ಕಮಗಳೂರು | 0 | 0.00 | 0.00 |
| 10 | ಚಿತ್ರದುರ್ಗ | 55 | 2.09 | 3.41 |
| 11 | ದಕ್ಷಿಣ ಕನ್ನಡ | 0 | 0.00 | 0.00 |
| 12 | ದಾವಣಗೆರೆ | 300 | 11.40 | 18.60 |
| 13 | ಧಾರವಾಡ | 61 | 2.32 | 3.78 |
| 14 | ಗದಗ | 143 | 5.43 | 8.87 |
| 15 | ಹಾಸನ | 29 | 1.10 | 1.80 |
| 16 | ಹಾವೇರಿ | 710 | 26.98 | 44.02 |
| 17 | ಕಲಬುರಗಿ | 1000 | 38.00 | 62.00 |
| 18 | ಕೊಡಗು | 0 | 0.00 | 0.00 |
| 19 | ಕೋಲಾರ | 10 | 0.38 | 0.62 |
| 20 | ಕೊಪ್ಪಳ | 0 | 0.00 | 0.00 |
| 21 | ಮಂಡ್ಯ | 8 | 0.30 | 0.50 |
| 22 | ಮೈಸೂರು | 462 | 17.56 | 28.64 |
| 23 | ರಾಯಚೂರು | 0 | 0.00 | 0.00 |
| 24 | ರಾಮನಗರ | 0 | 0.00 | 0.00 |
| 25 | ಶಿವಮೊಗ್ಗ | 115 | 4.37 | 7.13 |
| 26 | ತುಮಕೂರು | 27 | 1.03 | 1.67 |
| 27 | ಉಡುಪಿ | 0 | 0.00 | 0.00 |
| 28 | ಉತ್ತರ ಕನ್ನಡ | 8686 | 330.07 | 538.53 |
| 29 | ವಿಜಯಪುರ | 0 | 0.00 | 0.00 |
| 30 | ಯಾದಗಿರಿ | 167 | 6.35 | 10.35 |
| 31 | ವಿಜಯನಗರ | 0 | 0.00 | 0.00 |
| **ಒಟ್ಟು** | | **85862** | **3262.76** | **5323.44** |